ಹೂಡುವುದಕ್ಕೆ ಇವತ್ತು ಸದನ ಅನುಮತಿ ಕೊಟ್ಟಿದೆ. ಆದ್ದರಿಂದ ಬರುವ ತಿಂಗಳಲ್ಲೇ ಈ ೩೦೦ ಹೊಸ ಪಶು ವೈದ್ಯಕೀಯ ಸಂಸ್ಥೆಗಳನ್ನು ಹಾಗೂ ೧೦೦ ಆಸ್ಪತ್ರೆಗಳನ್ನು ಅಪ್‌ಗ್ರೇಡೇಷನ್ ಮಾಡುವ ಬಗ್ಗೆ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗುತ್ತದೆ. ಆಮೇಲೆ ಫಾಲಿ ಕ್ಲಿನಿಕ್‌ಗಳನ್ನು ೨೦ ಕಡೆ ಹೂಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಭಾರತದಲ್ಲೇ ಪ್ರಥಮವಾಗಿ ತುಮಕೂರಿನಲ್ಲಿ ಪ್ರಾಣಿಗಳಿಗಾಗಿ ಒಂದು ಎಕ್ಸ್-ರೇ ಯೂನಿಟ್, ಡಯಾಗ್ನಿಸ್ಟಿಕ್ ಸೆಂಟರ್, ಆಪರೇಷನ್ ಥಿಯೇಟರ್, ಇನ್ ಆಂಡ್ ಔಟ್ ಪೇಷೆಂಟ್ ವಾರ್ಡ್ ಮಾಡುವುದಕ್ಕೆ ನಿನ್ನೆ ದಿವಸ ಬಿಲ್ಡಿಂಗ್ ಇನಾಗ್ಯುರೇಟ್ ಮಾಡಿದ್ದೇವೆ. ಈಗಾಗಲೇ ೨೦ ಫಾಲಿ ಕ್ಲಿನಿಕ್‌ಗಳನ್ನು ಮಾಡುವುದರ ಜೊತೆಗೆ ೧೯೪೪-೪೫ನೇ ಸಾಲಿಗೆ ಐ. ಆರ್. ಡಿ. ಪಿ. ಪ್ರೋಗ್ರಾಮ್‌ನಲ್ಲಿ ೪೦ ಫಾಲಿ ಕ್ಲಿನಿಕ್‌ಗಳನ್ನು ಮಾಡಿ ಜಲ್ಲಿ ಪೋಸ್ಟ್ ಗ್ರಾಜುಯೇಟ್ಸ್ ಮತ್ತು ಸ್ಪೆಷಲೈಸ್ಟ್ ಡಾಕ್ಟರುಗಳನ್ನು ಹಾಕಬೇಕೆಂಬ ಯೋಜನೆ ಮಾಡುತ್ತಿದ್ದೇವೆ. ಆಗ ಫಿಸಿಬಿಲಿಟಿ ಇರುವ ಜೆನ್ಮಪಟ್ಟಣದಲ್ಲೂ ಒಂದು ಫಾಲಿ ಕ್ಲಿನಿಕ್ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದಾಗೆ ಮೊದಲು ೨೨೦೦ ಪಶು ವೈದ್ಯಕೀಯ ಸಂಸ್ಥೆಗಳು ಇದ್ದವು ಕಡೆ ಕೇವಲ ೧೪ ತಿಂಗಳಲ್ಲಿ ಪುನಃ ೧೦೨೦ ಪಶು ವೈದ್ಯಕೀಯ ಸಂಸ್ಥೆಗಳನ್ನು ಹೊಸದಾಗಿ ಮಾಡಿದ್ದೇವೆ. ಇನ್ನು ೨೦೦ ಸಂಸ್ಥೆಗಳನ್ನು ಮಾಡಿದರೆ, ಒನ್ ಪಂಚವಾರ್ಷಿಕ ಯೋಜನೆಯಾಯಿ ಎನು ನಾರ್ಮ್ಸ್ ಇದೆ ಅದರ ಪ್ರಕಾರ ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಪ್ರಥಮವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಕೆ. ಅನಂತಕೃಷ್ಣ.—ಬೆಂಗಳೂರು ನಗರದ ಶಿವಾಜಿ ನಗರದಲ್ಲಿ ಹೊಸದಾಗಿ ಪಶು ಸಂಸ್ಥೆಗಳನ್ನು ಮಾಡಲಾಗುತ್ತಿದೆಯೇ ?

ಶ್ರೀ ಕೆ. ಎನ್. ನಾಗೇಗೌಡ.—ಶಿವಾಜಿನಗರ ದೊಡ್ಡದು ಇರುವುದರಿಂದ ಅಲ್ಲಿ ವೆಟರ್‌ನರಿ ಡಿಸ್ಪೆನ್ಸರಿ ಮಾಡಬೇಕೆಂಬ ಯೋಜನೆ ಇದೆ. ಅದನ್ನು ಖಂಡಿತವಾಗಿ ಪರಿಗಣಿಸಲಾಗುತ್ತದೆ.

ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರುಗಳ ವರ್ಗಾವಣೆ

೨೮೬ (೭೫೫) **ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ).** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ: —

ಅ) ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆಯೇ ?

ಆ) ಅಂತಹ ಅಧಿಕಾರ ಸರ್ಕಾರಕ್ಕೆ ಇದ್ದರೆ ಸರ್ಕಾರ ನೀಡುವ ಆದೇಶಗಳನ್ನು ಜಿಲ್ಲಾ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಪಾಲಿಸುವುದಿಲ್ಲವೇಕೆ ?

ಇ) ಒಂದು ವೇಳೆ ಸರ್ಕಾರ ಆದೇಶ ನೀಡಿದರೂ ಸಹ ಜಿಲ್ಲಾ ಪರಿಷತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಇಚ್ಛೆಯಂತೆ ವರ್ಗಾವಣೆ ಮಾಡಬೇಕಾದರೆ ಈ ವರ್ಗಾವಣೆ ಅಧಿಕಾರ ಪೂರ್ತಿ ಅವರಿಗೆ ನೀಡಬಾರದೇಕೆ ?

ಈ) ಆದ್ದರಿಂದ ಸರ್ಕಾರ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಆದೇಶಗಳಲ್ಲಿ ಘರ್ಷಣೆ ಆಗಿ ವ್ಯವಸ್ಥೆ ಸರಿಯಾಗಿ ಆಗದೆ ಶಿಕ್ಷಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಅದಕ್ಕಾಗಿ ಆ ವ್ಯವಸ್ಥೆಯನ್ನು ಸರಿಪಡಿಸಿ ವರ್ಗಾವಣೆ ಆದೇಶಗಳಿಗಾಗಿ ಸೂಕ್ತವಾದ ವ್ಯವಸ್ಥೆ ಮಾಡಲಾಗುವುದೇ ?

ಶ್ರೀಮತಿ ನಾಗಮ್ಮ ಸಿ. ಕೆ. ಶಿವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು). —

ಅ) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಇಡಿ ೧೬೨ ಡಿಪಿಐಕ್ಯೂ ದಿನಾಂಕ:೨೦-೪-೯೨ರಂತೆ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಮಾಡುವ ಅಧಿಕಾರ ಉಪನಿರ್ದೇಶಕರುಗಳಿಗೆ ನೀಡಿದೆ. ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ನಂತರ ವರ್ಗಾವಣೆ ಅಧಿಕಾರ ಸರ್ಕಾರಕ್ಕೆ ಇರುತ್ತದೆ.

ಆ) ಪ್ರಶ್ನೆ ಉದ್ಭವಿಸುತ್ತಿಲ್ಲವಾದೆ.

ಇ) ಪ್ರಶ್ನೆ (ಅ)ಕ್ಕೆ ಉತ್ತರಿಸುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಬಂದಿರುವುದಿಲ್ಲ.

ಉ) ನಿರ್ದಿಷ್ಟ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ಬಸಂತ ರೆಡ್ಡಿ ಮೋತಕಪಲ್ಲಿ —ಮಾನ್ಯ ಅಧ್ಯಕ್ಷರೆ, ನನ್ನ 'ಅ' ಪ್ರಶ್ನೆಗೆ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರನ್ನು ವರ್ಗಾವಣೆ ಮಾಡುವ ಅಧಿಕಾರ ಸರ್ಕಾರಕ್ಕೆ ಇದೆಯೇ ? ಎಂದರೆ, ಸಾರ್ವತ್ರಿಕ ವರ್ಗಾವಣೆಯಲ್ಲಿ ಉಪ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆಯೆಂದು ತಿಳಿಸಿ ಅವಧಿ ಮುಗಿದ ನಂತರ ವರ್ಗಾವಣೆಯ ಅಧಿಕಾರ ಸರ್ಕಾರಕ್ಕೆ ಇರುತ್ತದೆಂದು ತಿಳಿಸಿರುತ್ತಾರೆ. 'ಆ' ಪ್ರಶ್ನೆಗೆ ಸರ್ಕಾರದ ನಿರ್ದೇಶನವನ್ನು ಉಪ ನಿರ್ದೇಶಕರು ಪಾಲಿಸುತ್ತಿಲ್ಲ ಏಕೆ ? ಎಂದರೆ, ಪಾಲಿಸುತ್ತಿದ್ದಾರೆಂದು ಹೇಳಿದ್ದಾರೆ. ನನ್ನ ಕೊನೆ ಪ್ರಶ್ನೆಗೆ ವ್ಯವಸ್ಥೆಯನ್ನು ಸರಿಪಡಿಸಿ ವರ್ಗಾವಣೆ ಆದೇಶಗಳಿಗೆ ಸೂಕ್ತವಾದ ವ್ಯವಸ್ಥೆ ಮಾಡಲಾಗುವುದೆ ? ಎಂದರೆ, ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟ ಪ್ರಕರಣವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ನನ್ನ ಕ್ಷೇತ್ರದ ಶಿಕ್ಷಕರ ವರ್ಗಾವಣೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಆದೇಶ ಸಂಖ್ಯೆ ಎಸ್‌ಎಸ್‌ಸಿಎಂ ೭೨೪೭೯-೯೩ ದಿನಾಂಕ ೧೦-೬-೯೩ ರಂದು ದೂರುಗಳಿರುವ ಹಾಗೂ ಕ್ರಿಮಿನಲ್ ಮೊಕದ್ದಮೆಗಳು ಇರುವ ಶಿಕ್ಷಕರನ್ನು ವರ್ಗಾವಣೆ ಮಾಡಲು ಆದೇಶ ನೀಡಿದ್ದರೆ ಮಾನ್ಯ ನಿರ್ದೇಶಕರು, ಬೆಂಗಳೂರು ಇವರು ಸಹಾ ದಿನಾಂಕ ೧೭-೬-೯೩ ರಲ್ಲಿ ಗುಲ್ಬರ್ಗಾ ಉಪ ನಿರ್ದೇಶಕರಿಗೆ ಪತ್ರ ಬರೆದು, ಈ ಶಿಕ್ಷಕರನ್ನು ವರ್ಗಾವಣೆ ಮಾಡಬೇಕೆಂದು ಆದೇಶ ನೀಡಿದ್ದರೂ ವರ್ಗಾವಣೆ ಮಾಡಿಲ್ಲ ಏಕೆ ? ಅಲ್ಲದೆ ಸಾರ್ವತ್ರಿಕ ವರ್ಗಾವಣೆ ಅವಧಿ ಮುಗಿದ ನಂತರವೂ ಸಹಾ ಮಾನ್ಯ ಮುಖ್ಯ ಮಂತ್ರಿಯವರ ಆದೇಶವನ್ನು ಅನುಸರಿಸಿ, ನಿರ್ದೇಶಕರು, ಬೆಂಗಳೂರು ಇವರು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿರುವ ಶಿಕ್ಷಕರನ್ನು ವರ್ಗಾವಣೆ ಮಾಡಲು ಪತ್ರ ನಂ. ಸಿಇ ೪೬೯ ಇತರೆ ೭೯-೯೩, ದಿನಾಂಕ ೧೭-೮-೯೩, ಹಾಗೂ ೮-೧೦-೯೩ ರಂದು ಆದೇಶ ಮಾಡಿದ್ದರೂ ಇದನ್ನು ಪಾಲಿಸಿಲ್ಲ ಏಕೆ ? ಈ ಪ್ರಕಾರ ಆದೇಶ ಪಾಲಿಸದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬಹುದೆ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ, ಜನರಲ್ ಟ್ರಾನ್ಸ್‌ಫರ್‌ನ್ನು ಮೇ ತಿಂಗಳ ಒಳಗಾಗಿ ಮಾಡಿ ಮುಗಿಸುತ್ತೇವೆ. ಆವಾಗ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲ್ ಟೀಚರ್ಸ್‌ನನ್ನು ವಿತ್ ಇನ್ ದಿ ಡಿಸ್ಟ್ರಿಕ್ಟ್ ವರ್ಗಾವಣೆ ಮಾಡುವುದಕ್ಕೆ ಡಿ.ಡಿ.ಪಿ.ಐ.ಗಳಿಗೆ ಪವರ್ಸ್ ಇದೆ. ಡಿವಿಷನ್ ಒಳಗೆ ಮಾಡುವುದಿದ್ದರೆ ಜಾಯಿಂಟ್ ಡೈರೆಕ್ಟರ್ಸ್ ಮಾಡುತ್ತಾರೆ. ಇಂಟರ್ ಡಿವಿಷನ್ ಮಾಡಬೇಕಾದರೆ ಡಿ.ಪಿ.ಐ. ಮಾಡುತ್ತಾರೆ. ಮತ್ತು ಇನ್ನು ಕೆಲವನ್ನು ಸಿ.ಪಿ.ಐ. ಮಾಡುತ್ತಾರೆ. ವರ್ಗಾವಣೆ ಕಾಲದಲ್ಲಿ ಈ ಅಧಿಕಾರಿಗಳು ಅವರ ವ್ಯಾಪ್ತಿಯೊಳಗೆ ಮಾಡುತ್ತಾರೆ. ಆ ಸಮಯದಲ್ಲಿ ಮೇಲೆ ಏನಾದರೂ ಕಂಪ್ಲೇಂಟ್ ಅಥವಾ ಇನ್ನಿತ್ಯಾದಿ ಕಾರಣದ ಮೇಲೆ ಟ್ರಾನ್ಸ್‌ಫರ್ ಮಾಡಬೇಕಾದರೆ ಅದು ಸಿ.ಪಿ.ಐ. ಗೆ ಮತ್ತು ಸರ್ಕಾರಕ್ಕೆ ಬಂದು ನಂತರ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ತಾವು ಉದಾಹರಣೆಗಳನ್ನು ಕೊಟ್ಟು ಸರ್ಕಾರದಿಂದ ಆದೇಶವಾಗಿದ್ದರೂ ಟ್ರಾನ್ಸ್‌ಫರ್ ಮಾಡಿಲ್ಲವೆಂದು ಹೇಳಿದ್ದೀರಿ, ನಾನು ಇದರ ಬಗ್ಗೆ ರಿಪೋರ್ಟ್ ತರಿಸಿಕೊಂಡು ಲೋಪವಾಗಿದ್ದರೆ ಅದನ್ನು ಸರಿ ಮಾಡುತ್ತೇನೆ.

ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ನಿರ್ವಹಣೆ

೨೮೭ (೮೧೬) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ).—ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ ಬೆಂಗಳೂರಿಗೆ ಅತಿ ಅಪಕೀರ್ತಿ ತರುವಂತಹ ಹಂತ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ರೋಗಿಗಳ ದೈನಂದಿನ ತುರ್ತು ಅವಶ್ಯಕತೆಗೆ ಬೇಕಾದ ಹಣವು ಆಸ್ಪತ್ರೆಯಲ್ಲಿ ಲಭ್ಯವಿರುವುದಿಲ್ಲ ?

ಇ) ಆಸ್ಪತ್ರೆ ಭೇಟಿ ಮಾಡಿದ ಒಳ ಮತ್ತು ಹೊರ ರೋಗಿಗಳಿಗೆ ಔಷಧ, ಬ್ಯಾಂಡೇಜ್ ಡೆಟಾಲ್, ಇಂಜಕ್ಷನ್ ಕೊಂಡುಕೊಳ್ಳುವುದು ಗಣನೀಯ ಕಷ್ಟವಾಗಿದೆ ?

ಈ) ವೈದ್ಯರು ಮತ್ತು ಸಿಬ್ಬಂದಿಗಳು ಸಾಕಷ್ಟು ಇಲ್ಲದಿರುವುದು ?